**ಇಲಾರಿಯ ಜುವಿನಾಟ್ಟೊ ಅವರ ಎರಡು ಕವಿತೆಗಳು**

# ಇಲ್ಲಿ ಎಲ್ಲವೂ ಅಮರ

ಸ್ವರ್ಗ ನರಕಗಳೆರಡಕ್ಕೂ
ಸಮನಾಗಿ ಸೇರಿದವಳು ನಾನು

ನನಗೆ ನಂಬಿಕೆ ಇದೆ
ಮಾಂಸ ಮತ್ತು ಎಂಜಲಿನ ಪರಿಶುದ್ಧತೆಯಲ್ಲಿ
ಜೀವಕೋಶಗಳ ದ್ರವ ಬೆಳಕಿನಲ್ಲಿ
ಎದೆ ಮಿಡಿತದ ಲಯ
ಮತ್ತದರ ತೀವ್ರತೆಯಲ್ಲಿ

ಚಿಟ್ಟೆರೆಕ್ಕೆಗಳ ಜೊತೆ ಸೇರಿ
ಅಮ್ಮನಿಂದ ಬಳುವಳಿಯಾಗಿ ಬಂದ
ಬುಟ್ಟಿ ತುಂಬ ಕಲ್ಲುಗಳ
ದಾರಿಯುದ್ದಕ್ಕೂ
ಒಂದೊಂದಾಗಿ ಖಾಲಿ ಮಾಡುತ್ತಲೇ
ಈ ಜಗದ ಭಾರವನೆಲ್ಲಾ ಹೊರುವೆ

ನನ್ನ ಒಂದೊಂದೇ ಹೆಜ್ಜೆಯನ್ನು ಅಳೆಯುವೆ
ಕಂಬಳಿಹುಳ ಮತ್ತೆ ಉಭಯವಾಸಿ
ಸಾಲಮಾಂಡರ್ ಹೆಜ್ಜೆಗಳಿಂದ...

ದೇವದಾರು ಮರಗಳ ಪ್ರಾರ್ಥನೆಯನ್ನು
ಮೌನವಾಗಿ ಆಲಿಸುತ್ತೇನೆ
ಮತ್ತವು ತೊಡಿಸುತ್ತವೆ
ಗುಲಾಬಿಯ ಕಿರೀಟವ ದುಂಬಿಗಳಿಗೆ
ಕಲ್ಲು ಬಂಡೆಗಳಲ್ಲಿ ಅಡಗಿ ಕುಳಿತ ದೇವತೆಗಳು
ಪಿಸುನುಡಿಯುತ್ತಾರೆ: ಚಿಂತೆ ಬೇಡ
ಇಲ್ಲಿ ಎಲ್ಲವೂ ಅಮರ
ಎಲ್ಲವೂ ಅಮರ!





ಚಿ: ಗುರು ರಾಷ್ಟೇಂದ್ರ

# ಬದುಕು ಮೋಸ ಮಾಡದು

ದಕ್ಕುತ್ತಿದೆಯೇ
ನಿನ್ನ ಸ್ವರ್ಶಾನುಭವಕ್ಕೆ

ಸೇದು ಬಾವಿಯ ರಾಟೆ ಹಗ್ಗ
ಮತ್ತದರ ನಿರಂತರ ಸವಕಳಿ?
ಸದಾ ನೆರಳಿಗಂಟಿದ ಕಾಯ
ಮತ್ತದರ ಪರಿಪೂರ್ಣ ಮಿಲನ?

ನೀನಿರುವೆ ಅಚಾನಕ್ಕಾಗಿ ಮಿಡಿಯುವ
ಯುಗಳ ಗೀತೆಯಲ್ಲಿ!
ದಿನದ ಯಾವುದೋ
ದಿವ್ಯ ಕ್ಷಣಗಳಲ್ಲಿ ತಲುಪುವೆ ನಿನ್ನ

ಪರಿಸ್ಥಿತಿಯ ಭಾರಕ್ಕೆ ನಲುಗಿ
ಕುಸಿಯುತ್ತಿದೆ ತಿಳಿಗೇಡಿ ಮಾಂಸ ಖಂಡ

'ಬದುಕು ಮೋಸ ಮಾಡದು' ಎಂದಷ್ಟೇ ಹೇಳು...

ಮತ್ತೆ ಮತ್ತೆ ಹೇಳು ನನಗೆ
ದಯಮಾಡಿ ಸುಳ್ಳನ್ನಾದರೂ ಹೇಳು